<u>**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.**</u>

ಸಿ.ಸಿ. ನಂ.1-24

ಪಿ.ಡಬ್ಯೂಃ7

ಸಿಡಬ್ಲ್ಯೂ-9

ಸಾಕ್ಷಿದಾರರ ಹೆಸರು : ನಂಜುಡಪ್ಪ ಎಚ್ ಬಿ

ತಂದೆಯ ಹೆಸರು : ಪುಟ್ಟಪ್ಪ ಬಿ

ವಯಸ್ಸು : 64 ವರ್ಷ

ಉದ್ಯೋಗ : ನಿವೃತ್ತ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲಾ ಉಪ ವಿಭಾಗ

ವಾಸ : ಬೆಳಗಾಂವ

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ.ಸ. ಆ ರವರಿಂದ ಃ**

1. ನಾನು ದಿನಾಂಕಃ 18-01-2018 ರಿಂದ ದಿನಾಂಕಃ 07-05-2020 ರ ತನಕ ಅಂಕೋಲಾ ತಾಲುಕಿನಲ್ಲಿ ಸಹಾಯಕ ಅರಣ್ಯ ಸಂರಕ್ಷಕಣಾಗಿ ಕಾರ್ಯ ನಿರ್ವಹಿಸಿದ್ದೇನೆ .

**<u>ಪಾಟೀ ಸವಾಲುಃ ಸ.ಸ. ಆ ರವರಿಂದ ಃ</u>**

ಈ ಪ್ರಕರಣದಲ್ಲಿ ಚಾಸಾ 8-ರವರು ಕಾಡು ಕುರಿ ಮಾಂಸವನ್ನು ಹಾಗೂ ಮಹೇಂದ್ರ ಸ್ಕಾರ್ಪಿಯೊ ವಾಹನ ನೂಂದಣಿ ಸಂಖ್ಯೆ ಕೆಎ31/ ಎಮ್ 4023 ಮಹಿಂದ್ರಾ ಸ್ಕಾರ್ಪಿಯೊ ವಾಹನ ಅದಕ್ಕೆ ಸಂಬಧಿಸಿದಂತೆ ಮೂಲ ಕಡತವನ್ನು ನನ್ನ ಕಚೇರಿಗೆ ತಂದು ಕೊಟ್ಟಿರುತ್ತಾರೆ . ನಂತರ ನಾನು ದಿಃ16-11-2019 ರಂದು ಅವರು ಜಪ್ತು ಮಾಡಿದ ಕಾಟ್ರೆಜ್ ವನ್ನು ಪರಿಶೀಲನೆ ಮಾಡುವ ಸಲುವಾಗಿ ಹಾಗೂ ಸದ್ರಿ ಕಾಟ್ರೆಜ್ ಅವರಿಗೆ ಎಲ್ಲಿಂದ ಸಿಕ್ಕಿತು ಎಂದು ತಿಳಿದು ಕೊಳ್ಳುವ ಸಲುವಾಗಿ ದ್ವಾರಕಾ arms stores , arms and ammunition , MFG ಕೊಟಿಎಸ್ ನಂ 607 ಎಸ ಎಮ ಪೇಟ ಬಳ್ಳಾರಿ ಇವರಿಗೆ ಕೋರಿಕೆ ಪತ್ರದ ಮುಖಾಂತರ ನಿವೇದಿಸಿಕೊಂಡಿರುತ್ತೇನೆ . ಸದ್ರಿ ಕೋರಿಕೆ ಪತ್ರ ಸಾಕ್ಷಿಗೆ ತೋರಿಸಲಾಗಿದ್ದು

ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11 (ಎ) ಎಂದು ಗುರುತಿಸಲಾಯಿತು .

2. ದಿಃ16-12-2019 ರಂದು ಷದ್ರಿ ಯವರು ನೀಡಿದ ವರದಿಯನ್ನು ನಾನು ಸ್ವಿಕರಿಸಿರುತ್ತೇನೆ . ಷದ್ರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ನಿಪಿ-12 ಎಂದು ಗುರುತಿಸಲಾಯಿತು .

3. ದಿಃ17-1-2020 ರಂದು ಷದ್ರಿ ಪ್ರಕರಣದ 1 ನೇ ಅರೋೀಪಿಗೆ ನಮ್ಮ ಕಚೇರಿಗೆ ಬಂದು ವಿಚಾರಣೆಗೆ ಹಾಜರಾಗಿ ಎಂದು ನೋಟಿಸನ್ನು ಕಳುಹಿಸಿರುತ್ತೇನೆ .

4. ದಿಃ23-1-2020 ರಂದು ಷದ್ರಿ ಪ್ರಕರಣದ 1 ನೆ ಆರೋಪಿಯು ವಿಚಾರಣೆಗೆ ಹಾಜರಾಗಿ ತಮ್ಮ ಸ್ವಖುಷಿ ಹೇಳಿಕೆಯನ್ನು ನೀಡಿರುತ್ತಾರೆ . ಸಾಕ್ಷಿಗೆ ನೋಟಿಸು ಮತ್ತು 1 ನೆ ಅರೋಪಿಯ ಹೇಳಿಕೆ ತೋರಿಸಲಾಗಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಮತ್ತು ಅದರ ಮೇಲೆ ಇರುವ ಸಹಿ ಗುರುತಿಸಿರುವುದರಿಂದ ನಿಪಿ-13 ಮತ್ತು 14 ಎಂದು ಸಾಕ್ಷಿಯ ಸಹಿಯನ್ನು ನಿಪಿ-13 (ಎ) ಮತ್ತು 14 (ಎ) ಗುರುತಿಸಲಾಯಿತು .ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅದೇ ದಿನ ಚಾಸಾ-1 ರಿಂದ 8 ರವರ ಹೇಳಿಕೆ ನಾನು ಪಡೆದುಕೊಂಡಿರುತ್ತೇಿನೆ .

5. ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿರುವ ನಿಪಿ-7 ನ್ನು ತೋರಿಸಲಾಗಿದ್ದು ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿರುವುದರಿಂದ ನಿಪಿ-7 (ಸಿ) ಎಂದು ಗುರುತಿಸಲಾಯಿತು . ದಿಃ3-11-2019 ರಂದು ಆ ದಿನ ವಶಪಡಿಸಿಕೊಳ್ಳಲಾದ ಕಾಡುಕುರಿಯ ಮಾಂಸ ವನ್ನು ನಿಪಿ-7 ರಂತೆ ಪುರವಣಿ ಪಂಚನಾಮೆ ಮಾಡಿ ಆ ಮಾಂಸವನ್ನು ಸಂಪೂರ್ಣವಾಗಿ ಸುಟ್ಟು ಹಾಕಿರುತ್ತೇವೆ . ನಾನು ದಿಃ7-5-2020 ರಂದು ಕರೋನಾ ರೋಗದ ಸಮಯದಲ್ಲಿ ವರ್ಗಾವಣೆ ಗೊಂಡಿರುತೇಿನೆ ನಂತರ ಈ ಕಡತವನ್ನು ಮುಂದಿನ ತನಿಖೆಗಾಗಿ ನಮ್ಮ ಇಲಾಖೆಯ ಚಾಸಾ -10 ರವರಿಗೆ ಹಸ್ತಾಂತರಿಸಿರುತ್ತೇನೆ . ನ್ಯಾಯಾಲಯದ ಮುಂದೆ ಗೈರು ಹಾಜರಾದ 1 ನೇ ಅರೋಪಿ ಯನ್ನು ನೋಡಿದರೆ ನಾನು ಗುರುತಿಸುತ್ತೇನೆ ಈ ಬಗ್ಗೆ ಅರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿರುತ್ತಾರೆ .

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಅರ್ ಎನ್ ವಕೀಲರಿಂದಃ**

6. ನಾನು ಮಾಂಸ ಸುಡುವಾಗ 5 ಕೆಜಿ 200 ಗ್ರಾಂ ಇತ್ತು ಸದ್ರಿ ತೂಕದ ವಿಷಯವನ್ನು ನಾವು ನಿಪಿ-7 ರಲ್ಲಿ ನಮೂದಿಸಿರುತ್ತೇವೆ . ಅದಕ್ಕಿಂತ ಪೂರ್ವದಲ್ಲಿ ಮಾನ್ಯ ನ್ಯಾಯಾಲಯದಲ್ಲಿ ಆ ಮಾಂಸದ ಸ್ಯಾಂಪಲ್ ವನ್ನು ಮಾದರಿಗಾಗಿ ತೆಗೆದು ಕೊಂಡು ನಂತರದಲ್ಲಿ ಸುಡ ಬೇಕು ಎಂದು ಆದೇಶ ಇತ್ತು ಎಂದರೆ ಸರಿ . ಆ ರೀತಿ ಸ್ಯಾಂಪಲ ತೆಗೆದು ಕೊಂಡಾಗ ಮಾಂಸದ ಮೂಲ ತೂಕ ಹೆಚ್ಚಾಗುತ್ತದಾ ಅಥವಾ ಕಡಿಮೆ ಯಾಗುತ್ತದಾ ಎಂದರೆ ಕಡಿಮೆ ಯಾಗುವುದಿಲ್ಲ ಇದ್ದಷ್ಟೆ ಇರುತ್ತದೆ . ಸಾಕ್ಷಿ ಪುನಃ ಮುಂದುವರೆದು ಆ ಮಾಂಸದಿಂದ 10 ಗ್ರಾಂ ತೂಕದ ಮಾಂಸವನ್ನು ಸ್ಯಾಂಪಲ ಗೆ ತೆಗೆದು ಕೊಂಡಿರಬಹುದು ಹಾಗಾದರೆ ಅಷ್ಟು ಗ್ರಾಂ ತೂಕ ಕಡಿಮೆ ಯಾಗುತ್ತದೊ ಅಥವಾ ಜಾಸ್ತಿಯಾಗುತ್ತದೊ ಎಂದರೆ ಕಡಿಮೆ ಯಾಗುತ್ತದೆ . ನನಗೆ ಎಷ್ಟು ಮಾಂಸ ವನ್ನು ಸ್ಯಾಂಪಲ ಗಾಗಿ ತೆಗೆದಿರುತ್ತಾರೆ ಎಂದು ಅದರ ತೂಕದ ಬಗ್ಗೆ ನನಗೆ ಮಾಹಿತಿ ಇಲ್ಲ . ನಿಮ್ಮ ತನಿಖೆಯ ಕಾಲದಲ್ಲಿ ಯಾರಾದರೂ ಕಾಡು ಕುರಿಯ ಮಾಂಸ ಬೇಟೆ ಯಾಡಿರುತ್ತಾರೆ ಎಂದು ದೂರನ್ನು ಕೊಟ್ಟಿರುತ್ತಾರಾ ಎಂದರೆ ಇಲ್ಲ . ಕಾಡು ಕುರಿ ಎಂಬುದು ನಿಮ್ಮ ದಾಖಲೆಗಳಲ್ಲಿ ಇರುವುದು ಬಿಟ್ಟರೆ ಅದು ಕಾಡು ಕುರಿಯ ಮಾಂಸ ಆಗಿರುತ್ತದೆ ಎಂದು ರುಜುವಾತು ಪಡಿಸಲು ಬೇರೆ ಕ್ರಮ ಕೈಗೊಂಡಿರುತ್ತೀರಾ ಎಂದರೆ ನಾವು ಸಿ ಸಿ ಎಮ್ ಬಿ ಯವರಿಗೆ ಬರೆದು ಅವರಿಂದ ಅದು ಕಾಡುಕುರಿಯ ಮಾಂಸ ಎಂದುಖಚಿತವಾಗಿ ಬಂದಿರುತ್ತದೆ . ಆ ರೀತಿಯಾಗಿ ಮಾದರಿಗಾಗಿ ಲ್ಯಾಬ್ ಗೆ ಕಳುಹಿಸಬೇಕಾದರೆ ಮಾಂಸ ಯಾವ ಪ್ರಾಣಿಗೆ ಸಬಂಧಿಸಿದ್ದು ಎಂದು ಕೇಳಬೇಕೆ ಹೊರತು ಇದು ಕಾಡು ಕುರಿಯ ಮಾಂಸ ಅಥವಾ ಊರು ಕುರಿಯ ಮಾಂಸ ಅಥವಾ ಕೋಳಿ ಮಾಂಸ ಎಂದು ಹೇಳಿ ಕಳುಹಿಸುವುದಲ್ಲ ಎಂದರೆ ನಮಗೆ ಆ ಪ್ರಾಣಿಯ ಕೂದಲು ಸಿಕ್ಕಿತು ಅದು ಕಾಡು ಕುರಿಯ ಮಾಂಸ ವಾಗಿರಬಹುದು ಎಂದು ಸಂಶಯದ ಆಧಾರದಲ್ಲಿ ಅದನ್ನು ಲ್ಯಾಬ್ ಗೆ ಮಾದರಿಗಾಗಿ ಕಳುಹಿಸಲಾಗಿರುತ್ತದೆ . ನಿಮ್ಮ ದಾಖಲಾತಿಯಲ್ಲಿ ಆ ಮಾಂಸದ ಜೊತೆಗೆ ಕೂದಲು ಇತ್ತು ಎಂದು ಇರುತ್ತದೆಯಾ ಎಂದರೆ ಸಾಕ್ಷಿ ದಾಖಲಾತಿ ನೋಡಿ ಮಹಜರದಲ್ಲಿ ಬರೆದಿಲ್ಲ

ಎಂದು ನುಡಿದಿರುತ್ತಾರೆ .  ನೀವು ಆರೋಪಿಗಳಿಗೆ ಬಲಿ ಪಶು ಮಾಡಬೇಕೆಂದು ಇದು ಕಾಡು ಕುರಿಯ ಮಾಂಸ ಎಂದು ಮತ್ತು ಅದರ ಜೊತೆಗೆ ಕೂದಲು ಇತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ನೀವು ಪರೀಕ್ಷೆಗೆ  ಮಾದರಿಯನ್ನು ಕಳುಹಿಸುವಾಗ ಆ ಕೋರಿಕೆ ಪತ್ರದಲ್ಲಿ ಸ್ವದ್ರಿ ಮಾಂಸವು ಕಾಡು ಕುರಿಗೆ ಸಂಬಂಧಿಸಿದ್ದು ಎಂದು ನೀವೆ ಬರೆದು ಕಳುಹಿಸಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ . ಅದಕ್ಕೆ ಪೂರಕವಾಗಿ ದಾಖಲಾತಿಗಳನ್ನು ಸೃಷ್ಟಿ ಮಾಡಿ ಕೊಂಡಿರುತ್ತೀರಿ ಎಂದರೆ ಸರಿಯಲ್ಲ . ಹೀಗಾಗಿ ಈ ದಾಖಲೆಗಳು ಈ ಪ್ರಕರಣದ ಸಲುವಾಗಿ ಕಾಡು ಕುರಿಯ ಮಾಂಸ ಎಂದು ತೋರಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ . ನಿಪಿ–2 ರ ದಾಖಲಾತಿಯಲ್ಲಿ ನಮೂದಿಸುವಾಗ ಶಕ್ತಿ ಮಾನ ಎಕ್ಸಪ್ರೆಸ್ 12 ಗೇಜ್ 70 ಎಮ್ ಎಮ್ ಕಾಟ್ರೇಜ್ ನಮೂದು ಇಲ್ಲ ಎಂದರೆ   ನನಗೆ ಗೊತ್ತಿಲ್ಲ .  ಇದನ್ನು ಈ ಅರೋಪಿ ಮೇಲೆ ಪ್ರಕರಣ ಮಾಡಬೇಕೆಂದು ಈ ಹೆಸರನ್ನು ಸುಳ್ಳಾಗಿ ಸೃಷ್ಟಿ ಮಾಡಿರುವುದು ಎಂದರೆ ಸರಿಯಲ್ಲ . ಅದೇ ರೀತಿ ಅರೋಪಿತರ ಹೇಳಿಕೆಯನ್ನು ಮತ್ತು ಸಾಕ್ಷಿದಾರರ ಹೇಳಿಕೆ  ಸೃಷ್ಟಿ ಮಾಡಿರುತೀರಿ ಎಂದರೆ ಸಸರಿಯಲ್ಲ . ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ .  ಸರಕಾರದಿಂದ ಶಬಾಷಗಿರಿಯನ್ನು ಪಡೆದು ಕೊಳ್ಳಲು ಸ್ವದ್ರಿ ದಾಖಲಾತಿಯನ್ನು ಮತ್ತು ಹೇಳಿಕೆಗಳನ್ನು ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ . ನನ್ನ ತನಿಖೆ ಕಾಲದಲ್ಲಿ ಅರೋಪಿತರಿಗೂ ಹಾಗೂ ಈ ಮುದ್ದೆ ಮಾಲಿಗೂ  ಯಾವುದೆ ಸಂಬಂದ ಇಲ್ಲ ಎಂದು  ಖಾತ್ರಿ ಇತ್ತು ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು  ಮಾಡಿಸಲಾಯಿತು)

ಓ  ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.**

ಸಿ.ಸಿ. ನಂ.67-23

ಪಿ.ಡಬ್ಲ್ಯೂಃ7

ಸಿಡಬ್ಲ್ಯೂ-4

ಸಾಕ್ಷಿದಾರರ ಹೆಸರು : ವಿಠಲ ಕೊವಳ್ಳಿ

ತಂದೆಯ ಹೆಸರು : ಯಮನಪ್ಪಾ ಕೊವಳ್ಳಿ

ವಯಸ್ಸು : 30 ವರ್ಷ

ಉದ್ಯೋಗ : ಗಸ್ತು ಅರಣ್ಯ ಪಾಲಕ , ಕೂಳಗಿ , KTR

ವಾಸ : ಕೂಳಗಿ

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು 2018 ರಿಂದ 2024 ರ ತನಕ ಗಸ್ತು ಅರಣ್ಯ ಪಾಲಕನಾಗಿ ಅಂಕೋಲಾ ತಾಲೂಕಿನ ರಾಮನಗುಳಿ ವಲಯದಲ್ಲಿ ಕಾರ್ಯ ನಿರ್ವಹಿಸಿದ್ದೇನೆ .

**ಪಾಟೀ ಸವಾಲುಃ ಸ .ಸ. ಆ ರವರಿಂದ ಃ**

2. ದಿಃ5-1-2022 ರಂದು ಚಾಸಾ -1 ರವರಿಗೆ ಕಮ್ಮಾಣಿ ಗ್ರಾಮದ ಮದ್ದಣ ಮನೆ ನಾಲಾದ ಬಳಿ ಒಂದು ಕಾಡು ಪ್ರಾಣಿಯನ್ನು ಬೇಟೆಯಾಡಿ ಸಾಯಿಸಿರುವುದರ ಬಗ್ಗೆ ಖಚಿತ ಮಾಹಿತಿ ಬಂದಿದ್ದು ಅದರಂತೆ ಪಂಚರಾದ ಚಾಸಾ -2 ಮತ್ತು 3 ರವರನ್ನು ಕರೆದು ಕೊಂಡು ನಾನು ಅವರೊಂದಿಗೆ ಕಮ್ಮಾಣಿ ಗ್ರಾಮದ ಮದ್ದನ ಮನೆ ನಾಲಾಗೆ ಹೋಗಿರುತ್ತೇವೆ . ಆ ಸಮಯದಲ್ಲಿ ನಾಲಾದ ಮೇಲುಗಡೆ 4 ಜನರು ಒಂದು ಸತ್ತ ಕಾಡು ಪ್ರಾಣಿಯ ಕಳೆಬರಹವನ್ನು ತೊಳೆಯುತ್ತಾ ಇರುವುದು ಕಂಡು ಬಂದಿರುತ್ತದೆ . ಅದರಲ್ಲಿ ಇಬ್ಬರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ . ಮತ್ತಿಬ್ಬರನ್ನು ನಾವು

ಹಿಡಿದು ಕೊಂಡಿರುತ್ತೇವೆ . ಅವರಿಬ್ಬರನ್ನು ಚಾಸಾ –1 ರವರು ವಿಚಾರಿಸಿದಾಗ ಅದರಲ್ಲಿ ಒಬ್ಬನು ತನ್ನ ಹೆಸರು ಸಾಣು ಮೋಹನ ಸಿದ್ದಿ, ಕಮ್ಮಾಣಿ ಗ್ರಾಮ ಎಂದು ಹೇಳಿದ್ದು ಹಾಗೂ ಇನ್ನೊಬ್ಬರು ಕಮಲಾಕರ ಸಾಣು ಸಿದ್ದಿ ಎಂದು ಹೇಳಿರುತ್ತಾರೆ . ಆ ನಂತರ ನಾವುಗಳು ಸದ್ರಿ ಕಾಡು ಪ್ರಾಣಿ ಯನ್ನು ಪರಿಶೀಲನೆ ಮಾಡಿದಾಗ ಅದು ಕಾಡು ಹಂದಿ ಎಂದು ತಿಳಿದು ಬಂದಿರುತ್ತದೆ . ನಂತರ ಚಾಸಾ –1 ರವರು 1 ನೆ ಅರೋಪಿಯನ್ನು ವಿಚಾರಿಸಿರುತ್ತಾರೆ . ಅವರು ತಮ್ಮ ತೋಟಕ್ಕೆ ಕಾಡು ಹಂದಿಗಳು ಬೆಳೆ ನಾಶ ಮಾಡುತ್ತಿರುವುದರಿಂದ ಸದ್ರಿಯವರ ತೋಟದಿಂದ ಲಗ್ತಿರುವ ಮೇನ ಲೈನ್ ದಿಂದ ಅವರ ತೋಟಕ್ಕೆ ಅಳವಡಿಸಲಾದ ಐಬೆಕ್ಸ ತಂತಿ ಬೇಲಿಗೆ ನೇರವಾಗಿ ವಿಧ್ಯುತ ಹರಿಸಿ ಸಾಯಿಸಿರುವುದಾಗಿ ಹೇಳಿರುತ್ತಾರೆ . ನಂತರ ನಾವುಗಳು ಪಂಚರನ್ನು ಕರೆದುಕೊಂಡು ಕಾಡು ಹಂದಿ ಸತ್ತು ಬಿದ್ದ ಸ್ಥಳ ಪರಿಶೀಲನೆ ಮಾಡಿದಾಗ ಒಂದು ಕಾಡು ಪ್ರಾಣಿಯು ಸತ್ತು ಬಿದ್ದು ಒದ್ದಾಡಿರುವ ಕುರುಹು ಕಂಡು ಬಂದಿರುತ್ತದೆ . ಸದ್ರಿ ಆರೋಪಿತರು 1 ನೇಅರೊಪಿ ಯು 3 ಮತ್ತು 4 ನೆ ಅರೋಪಿತರನ್ನು ಸ್ಥಳಕ್ಕೆ ಕರೆಸಿಕೊಂಡು ಅವರತೋಟದಲ್ಲಿ ಸತ್ತು ಬಿದ್ದ ಕಾಡು ಹಂದಿಯ ಕಳೆಬರಹವನ್ನು ಅಲ್ಲೆ ಹತ್ತಿರದಲ್ಲಿರುವ ಮದ್ದಣ ಮನೆ ನಾಲಾಗೆ ತೆಗೆದುಕೊಂಡು ಹೋಗಿ ಅಲ್ಲಿಯೆ ಇರುವ ಕಟ್ಟಿಗೆ ತೆಗೆದು ಕೊಂಡು ಸುಟ್ಟು ಮಾಂಸ ಮಾಡುವ ಉದ್ದೇಶದಿಂದ ಅವರ ತೋಟದಲ್ಲಿ ಇರುವ ಬಾಳೆ ಎಲೆ ತಂದು ಹಾಸಿದ್ದು ಅವರು ಸದ್ರಿ ಸತ್ತ ಹಂದಿಯ ಕಳೆ ಬರಹವನ್ನು ತೊಳೆಯುತ್ತಿರುವ ಸಮಯದಲ್ಲಿ ನಾವು ಹೋಗಿರುತ್ತೇವೆ . ನಂತರ ಅರಣ್ಯ ಕಾನೂನು ಉಲ್ಲಂಘನೆ ಯಾಗಿರುವುದು ಖಚಿತ ಪಡಿಸಿಕೊಂಡು ಸದ್ರಿ ಸತ್ತು ಬಿದ್ದ ಕಾಡು ಹಂದಿಯ ದೇಹದ ಅಳತೆಯನ್ನು ತೆಗೆದುಕೊಂಡು ಸ್ಥಳದಲ್ಲಿ ಜಿಪಿಎಸ್ ರೈಡಿಂಗ ತೆಗೆದು ಕೊಂಡಿರುತ್ತೇವೆ ಪಂಚರ ಸಮಕ್ಷಮ ಅಲ್ಲಿಯೇ ಪಂಚನಾಮೆ ಕ್ರಮ ಜರುಗಿಸಿರುತ್ತೇವೆ . ನಂತರ ಚಾಸಾ –1 ರವರು ಸ್ಥಳದಲ್ಲಿ ಇದ್ದ ಕಾಡು ಹಂದಿಯನ್ನು ಐಬೆಕ್ಸ ತಂತಿಯನ್ನು ಪಂಚನಾಮೆ ಮುಖಾಂತರ ಅಮಾನತ್ತು ಪಡಿಸಿಕೊಂಡಿರುತ್ತೆವೆ, ನಾವು ಸ್ಥಳದಲ್ಲಿ ಪೊಟೊ ತೆಗೆದಿರುತ್ತೇವೆ ಸಾಕ್ಷಿ ಗೆ ಈಗಾಗಲೆ ಗುರುತಿಸಲಾಗಿರುವ ನಿಪಿ–1 ನ್ನು ತೋರಿಸಲಾಗಿದ್ದು ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುವುದರಿಂದ ನಿಪಿ–

1(ಡಿ) ಎಂದು ಗುರುತಿಸಲಾಯಿತು . ಈಗಾಗಲೇ ಗುರುತಿಸಲಾಗಿರುವ ನಿಪಿ-2 ರಿಂದ 7 ರ ಪೊಟೊಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ನ್ಯಾಯಾಲಯದ ಮುಂದೆ ಇರುವ ಮು ಮಾ-1 ವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ನ್ಯಾಯಾಲಯದ ಮುಂದೆ 1 ಮತ್ತು 2 ಅರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ಓಡಿ ಹೋದ ಆರೋಪಿತರ ಹೆಸರುಗಳನ್ನು 1 ನೆ ಅರೋಪಿಯನ್ನು ವಿಚಾರಿಸಿದಾಗ ಅವರ ಹೆಸರು ಗಣಪಾ ಕರಿಯ ಸಿದ್ದಿ ಹಳವಳ್ಳಿ ಹಾಗೂ ಅಶೊಕ ಕೃಷ್ಣ ಸಿದ್ದಿ ಹಳವಳ್ಳಿ ಎಂದುತಿಳಿದು ಬಂದಿರುತ್ತದೆ . ನಂತರ ಚಾಸಾ -1 ರವರು ಈ ಪ್ರಕರಣದ ತನಿಖೆಗಾಗಿ 1 ಮತ್ತು 2 ರವರನ್ನು ಅರೆಸ್ಟ ಮಾಡಿರುತ್ತಾರೆ . ಮತ್ತು ಸದ್ರಿಯವರನ್ನು ವಲಯ ಕಚೇರಿಗೆ ಹಾಜರ ಪಡಿಸಿ ನಂತರದಲ್ಲಿ ನ್ಯಾಯಾಲಯಕ್ಕೆ ಹಾಜರ ಪಡಿಸಲಾಗಿರುತ್ತದೆ . ಅಲ್ಲಿಯವರೆಗೂ ನಾನು ಬೆಂಗಾವಲಿಗಾಗಿ ಜೊತೆ ಯಲ್ಲಿ ಇದ್ದೆ . ನಂತರ ಅರೋಪಿತರನ್ನು ಕರೆದು ಕೊಂಡು ನ್ಯಾಯಾಲಯದ ಆದೇಶದಂತೆ ಕಾರವಾರ ಜೈಲಿಗೆ ಹೋಗಿರುತ್ತೇನೆ .

2.ದಿಃ6-1-22 ರಂದು ಸತ್ತ ಕಾಡು ಹಂದಿಯ ಕಳೆ ಬರಹನ್ನು ವಿಲೆ ವಾರಿ ಮಾಡಲು ನ್ಯಾಯಾಲಯಕ್ಕೆ ಅನುಮತಿ ಕೋರಲಾಗಿರುತ್ತದೆ . ಅದು ನ್ಯಾಯಾಲಯದಿಂದ ತಡವಾಗಿ ಬಂದಿದ್ದು ನಂತರ ಮಾರನೆ ದಿನ ಬೆಳಿಗ್ಗೆ ದಿಃ7-1-2022 ರಂದು ಮದ್ದಣ ಮನೆ ನಾಲಾದಲ್ಲಿ ಅಲ್ಲೆ ಸುತ್ತ ಮುತ್ತ ಇರುವ ಕಟ್ಟಿಗೆ ತೆಗೆದು ಸದ್ರಿ ಕಾಡು ಹಂದಿ ಕಳೆಬರಹವನ್ನು ಸುಡಲಾಗಿರುತ್ತದೆ . ಆ ಸಮಯದಲ್ಲಿ ಪೊಟೊ ತೆಗೆದು ಜಿಪಿಎಸ್ ರಿಡಿಂಗ್ ಮಾಡಿ ಪಂಚನಾಮೆ ಮಾಡಿರುತೇವೆ . ಸಾಕ್ಷಿಗೆ ಸದ್ರಿ ಪಂಚನಾಮೆ ನಿಪಿ-11 ತೋರಿಸಲಾಗಿದ್ದು ಸಾಕ್ಷಿ ಅದರಲ್ಲಿರುವ ಸಹಿ ನೋಡಿ ಗುರುತಿಸಿರುವುದರಿಂದ ನಿಪಿ-11 (ಇ) ಎಂದು ಗುರುತಿಸಲಾಯಿತು . ಸಾಕ್ಷಿಗೆ ಈಗಾಗಲೆ ಗುರುತಿಸಲಾಗಿರುವ ನಿಪಿ-12 ರಿಂದ 14 ರ ಪೊಟೊಗಳನ್ನು ತೋರಿಸಲಾಗಿದ್ದು ಸಾಕ್ಷಿ ಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ . ಈ ಬಗ್ಗೆ ನಾನು ನನ್ನ ತನಿಖಾಧಿಕಾರಿಯ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ .

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಅರ್ ಎನ್ ಎಚ್ ವಕೀಲರಿಂದಃ**

3. ನಮ್ಮ ಕಚೇರಿಯಲ್ಲಿ ನಮ್ಮ ಕರ್ತವ್ಯದ ದಿನಚರಿ ಇರುತ್ತದೆ ಎಂದರೆ ಸರಿ . ಆ ಕರ್ತವ್ಯದ ದಿನಚರಿಯಲ್ಲಿ ನೀವು ಯಾವ ಯಾವ ದಿನಾಂಕದಂದು ಎಲ್ಲೆಲ್ಲಿ ಕರ್ತವ್ಯ ಕ್ಕೆ ಹೋಗುತ್ತಿರಿ ಎಂದು ನಮೂದು ಆಗುತ್ತದೆ ಎಂದರೆ ಸರಿ . ನೀವು ದಿಃ 5-1-2022 ರಂದು ಕಮ್ಮಾಣಿ ಗ್ರಾಮದಲ್ಲಿ ಗಸ್ತು ಕರ್ತವ್ಯ ಮಾಡಿದ ಬಗ್ಗೆ ಕರ್ತವ್ಯ ದಿನಚರಿಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಆ ಕರ್ತವ್ಯ ದಿನಚರಿಯನ್ನು ನಾವು ವರ್ಷದ ಕೊನೆಯಲ್ಲಿ submit ಮಾಡುತ್ತೇವೆ . ದಿಃ5-1-2022 ರಂದು ನಾನು ಕಮ್ಮಾಣಿ ಗ್ರಾಮದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದೆ ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿರುತ್ತಿರಾ ಎಂದರೆ ಇಲ್ಲ . ರಾಮನಗುಳಿಯಲ್ಲಿ ವಲಯ ಅರಣ್ಯ ಕಚೇರಿ ಇರುತ್ತದೆ ಎಂದರೆ ಸರಿ . ರಾಮನಗುಳಿಯಲ್ಲಿ ಅರಣ್ಯ ಅಧಿಕಾರಿಗಳ ಕ್ವಾರ್ಟಸ ಇರುತ್ತದೆ ಎಂದರೆ ಸರಿ . ನಾನು ರಾಮನಗುಳಿ ಕ್ವಾರ್ಟಸ ದಲ್ಲಿ ವಾಸ ಮಾಡುತ್ತೇನೆ . ರಾಮನಗುಳಿ ಕ್ವಾಟರ್ಸದಿಂದ ನಾವು ರಾಮನಗುಳಿ ಕಚೇರಿಗೆ ಹೋಗುವುದಿಲ್ಲ ನೇರವಾಗಿ ನಮ್ಮ ಕ್ವಾರ್ಟಸದಿಂದ ಕಮ್ಮಾಣಿ ಕಡೆ ಹೋಗುತ್ತೇವೆ . ನಾನು ಕಮ್ಮಾಣಿ ಬೀಟ ಗೆ ಅಧಿಕೃತವಾಗಿ ಗಸ್ತಿಗಾಗಿ ನಿಯೋಜನೆ ಗೊಂಡ ಸಿಬ್ಬಂದಿ ಅಲ್ಲ ಎಂದರೆ ನಾನು ಆ ದಿನ ಕಮ್ಮಾಣಿ ಬೀಟ ಗೆ incharge ದಲ್ಲಿ ಇದ್ದೆ . ನಾನು ಕಮ್ಮಾಣಿ ಬೀಟ ಗೆ 2021 ರಿಂದ incharge ಕರ್ತವ್ಯ ದಲ್ಲಿ ಇದ್ದೆ . incharge ಇರುವಾಗ ನಿಮಗೆ ಅಧಿಕೃತ ವಾದ ಒಂದು ಆದೇಶ ನಿಮ್ಮ ಕಚೇರಿಯಿಂದ ಬರುತ್ತದೆ ಎಂದರೆ ಸರಿ . ಆಂತಹ ಆದೇಶದ ಪತ್ರವನ್ನು ನಿಮ್ಮ ತನಿಖಾಧಿಕಾರಿಗೆ ಕೊಟ್ಟಿರುತ್ತೀರಾ ಎಂದರೆ ಇಲ್ಲ .ದಿಃ5-1-2022 ರಂದು ನಾನು ನನ್ನ ರಾಮನಗುಳಿ ಕ್ವಾರ್ಟಸ ದಿಂದ ಹೋಗಿಲ್ಲ ನಾನು ಆ ದಿನ ಹಳವಳ್ಳಿ ಗ್ರಾಮದ ಗಸ್ತು ಕರ್ತವ್ಯದಲ್ಲಿ ಇದ್ದೆ . ಚಾಸಾ -1 ರವರು ಪೋನ ಕರೆ ಮಾಡಿದಾಗ ನಾನು ಕಮ್ಮಾಣಿ ಗ್ರಾಮಕ್ಕೆ ಹೋಗಿರುತ್ತೇನೆ . ಚಾಸಾ -1 ರವರು ರಾಮನಗುಳಿಯಲ್ಲಿ ವಾಸ ವಾಗಿರುತ್ತಾರೆ . ಪಂಚರನ್ನು ಯಾರು ಕರೆದರು ಎಂದರೆ ನಾನು ಮತ್ತು ಚಾಸಾ -1 ರವರು ಸೇರಿದ ಮೇಲೆ ಪಂಚರನ್ನು ನಾವಿಬ್ಬರು ಕರೆದು

ಕೊಂಡು ಹೋದೆವು . ಚಾಸಾ -2 ಮತ್ತು 3 ರವರು ನಮ್ಮ ಇಲಾಖೆಯ ದಿನಗೂಲಿ ನೌಕರರು . ಚಾಸಾ -2 ರವರು ನಮ್ಮ ಇಲಾಖೆಯಲ್ಲಿದ್ದು 15 ರಿಂದ 20 ವರ್ಷವಾಗಿರಬಹುದು ಅದೇ ರೀತಿ ಚಾಸಾ 3 ರವರು ನಮ್ಮ ಇಲಾಖೆಯಲ್ಲಿ ಇದ್ದು 7-8 ವರ್ಷ ವಾಯಿತು . ಚಾಸಾ-1 ರವರು 12-20 ರ ಆಸುಮಾಸಿನಲ್ಲಿ ನನಗೆ ಪೋನ ಮಾಡಿರುತ್ತಾರೆ . ಆ ದಿನ ಹಳವಳ್ಳಿ ಬೀಟ ದಲ್ಲಿ ನಾನು ಒಬ್ಬನೆ ಕೆಲಸ ಮಾಡುತ್ತಿದ್ದೆ . ಚಾಸಾ -1 ರವರೊಂದಿಗೆ ಆ ದಿನ ಬೇರೆಯಾರಾದರೂ ಕೆಲಸ ಮಾಡಲು ಜೊತೆಯಲ್ಲಿ ಇದ್ದರಾ ಇಲ್ಲ .ಚಾಸಾ-2 ಮತ್ತು 3 ರವರು 12-30 ಗಂಟೆಗೆ ಬಂದಿರುತ್ತಾರೆ . ನಾನು ನೋಡಿದಾಗ ಚಾಸಾ -1 ರವರೊಂದಿಗೆ ಚಾಸಾ -2 ಮತ್ತು 3 ರವರು ಇದ್ದರು .ಕಮ್ಮಾಣಿ , ಹಳವಳ್ಳಿ , ಕಲ್ಲೇಶ್ವರ ಪುನರವಸತಿ ಕೇಂದ್ರ ಎಂದರೆ ಸರಿ . ಕಮ್ಮಾಣಿ ಮತ್ತು ಹಳವಳ್ಳಿ ಯಲ್ಲಿ 1,500 ರಿಂದ 2000 ದಷ್ಟು ಮನೆಗಳು ಇರುತ್ತವೆ . ಮದ್ದನ ಮನೆಯಲ್ಲಿ ಸಹ ಬಹಳಷ್ಟು ಜನ ವಸತಿ ಇರುವ ಪ್ರದೇಶ ಎಂದರೆ ಸರಿ .

4. ನಾಲಾ ಎಂದರೆ ನೀರು ಹರಿಯುವ ಪ್ರದೇಶ ಎಂದರೆ ಸರಿ . ನಿಪಿ-4 ರಿಂದ 6 ರ ಪೊಟೊದಲ್ಲಿ ಎಲ್ಲಿಯೂ ಸಹ ನೀರು ಹರಿಯುವ ಜಾಗ ಕಾಣುವುದಿಲ್ಲ ಎಂದರೆ ಕಲ್ಲು ಗಳ ಮಧ್ಯ ನೀರು ಹರಿಯುವುದು ಕಾಣುತ್ತದೆ . ಯಾವುದೆ ಒಂದು ಕಾಡು ಹಂದಿಯನ್ನು ಸುಟ್ಟರೆ ಅದರ ಕಾಲಿನ ಒಸಡು ಸಹ ಸುಡುತ್ತದೆ ಎಂದರೆ ಸರಿ . ನಿಪಿ-3 ರ ಪೊಟೊದಲ್ಲಿ ಕಾಡು ಹಂದಿಯ ಕಾಲಿನ ಒಸಡು ಸುಟ್ಟಿದ್ದು ಕಾಣುವುದಿಲ್ಲ ಎಂದರೆ ಅವರು ಮಾಂಸವನ್ನು ಮಾಡುವ ಉದ್ದೇಶದಿಂದ ಆ ಹಂದಿಯ ದೇಹದ ಭಾಗವನ್ನು ಸುಟ್ಟಿರುತ್ತಾರೆ . ಯಾವುದೇ ಒಂದು ಕಾಡು ಹಂದಿಯನ್ನು ಸುಡಬೇಕಾದರೆ ಅದರ ಕಾಲಿನ ಒಸಡು ಸುಡಬಾರದು ಎಂದಾಗಲೆ ಸದ್ರಿ ಹಂದಿಯು ಕಾಲನ್ನು ಮೇಲಕ್ಕೆ ಮಾಡಿ ಅದನ್ನು ನೇತು ಹಾಕಿ ಸುಡಬೇಕಾಗುತ್ತದೆ ಎಂದರೆ ಅವರು ಕಟ್ಟಿಗೆಗಳ ರಾಶಿ ಮಾಡಿ ಅದರ ಮೇಲೆ ಕಾಡು ಹಂದಿ ಇಟ್ಟು ಸುಟ್ಟಿರುತ್ತಾರೆ . ಸದ್ರಿ ಕಾಡು ಹಂದಿಯನ್ನು ಸುಟ್ಟಂತೆ ಕಂಡರೆ ಅಲ್ಲಿ ಬೂದಿ, ಮಸಿ ಎಲ್ಲಾ ಪರಿಕರ ಬಿಳುತ್ತದೆ ಎಂದರೆ ಸರಿ .ನೀವು ಹಾಜರಪಡಿಸಿದ ಪೊಟೊಗಳಲ್ಲಿ ಸದ್ರಿ ಬೆಂಕಿ ಹಾಕಿದ ಬಗ್ಗೆ ಬೂದಿ ಮತ್ತು ಮಸಿ ಕಾಣುವುದಿಲ್ಲ ಎಂದರೆ ಸರಿಯಲ್ಲ . ಕಟಿಗೆ ಸುಟ್ಟರೆ ಅದರ ಮುಂದಿನ ಭಾಗ ಕಪ್ಪಗೆ ಇರುತ್ತದೆ

ಎಂದರೆ ಸರಿ . ಈ ಪೊಟೊಗಳಲ್ಲಿ ಯಾವುದೆ ಒಂದು ಕಟ್ಟಿಗೆ ಸಹ ಕಪ್ಪಾಗಿ ಸುಟ್ಟ ರೀತಿಯಲ್ಲಿ ಕಾಣುವುದಿಲ್ಲ ಎಂದರೆ ಬಾಳೆ ಎಲೆಗಳು ಇರುತ್ತವೆ ಹಾಗಾಗಿ ಕೆಲವೊಂದು ಕಟ್ಟಿಗೆ ಗಳು ಸುಟ್ಟ ರೀತಿಯಲ್ಲಿ ಕಾಣುತ್ತವೆ . ಕೆಲವೊಂದು ಕಾಣುವುದಿಲ್ಲ. ನಿಪಿ-3 ಮತ್ತು 5 ರಲ್ಲಿ ಸುಟ್ಟ ಕಟ್ಟಿಗೆ ಯಾವುದು ಕಾಣುವುದಿಲ್ಲ ಎಂದರೆ ಸರಿಯಲ್ಲ . ಯಾವುದೇ ಒಂದು ಪ್ರಾಣಿಯನ್ನು ಸುಟ್ಟ ನಂತರ ಅದರ ಮಾಂಸ ಕಂದು ಬಣ್ಣಕ್ಕೆ ತಿರುಗುತ್ತದೆ ಎಂದರೆ ಸರಿ . ನನ್ನ ಪ್ರಕಾರ ಸದ್ರಿ ಕಾಡು ಹಂದಿ ಮಾಂಸವನ್ನು ನೋಡಿದಾಗ ಅದು ನೀರಿನಲ್ಲಿ ತೋಳೆದಿರುವುದರಿಂದ ತಿಳಿ ಹಳದಿ ಬಣ್ಣ ಕಾಣುತ್ತಿತ್ತು . ನಿಪಿ-3 ಮತ್ತು 4 ರಲ್ಲಿ ಅದರ ಮಾಂಸ ಕೆಂಪಾಗಿರುತ್ತದೆ ಎಂದರೆ ಅದು ಪೊಸ್ಟ ಮಾರ್ಟಮ ಮಾಡಿದಾಗ ಕಟ್ ಮಾಡಿರುವ ಪೊಟೊ ವಾಗಿರುತ್ತದೆ . ಆ ಕಾರಣದಿಂದ ಅದು ಕೆಂಪಗೆ ಕಾಣುತ್ತದೆ . ಸದ್ರಿ ಕಾಡು ಹಂದಿಯ ಮಾಂಸವನ್ನು ಮದ್ದಣ ಮನೆನಾಲಾದ ಸಣ್ಣಪುಟ್ಟ ಕಲ್ಲಿನ ಮೇಲೆ ಸುಡಲಾಗಿರುತ್ತದೆ . ಬೆಂಕಿ ಹಾಕಬೇಕಾದರೆ ಕಟ್ಟಿಗೆ ರಾಶಿ ಹಾಕಿ ಬೆಂಕಿ ಹಾಕಿ ಸುಡಬೇಕಾಗುತ್ತದೆ . ನಿಪಿ-4 ಮತ್ತು 5 ರಲ್ಲಿ ಯಾವುದೆ ಕಟ್ಟಿಗೆ ಶೇಖರಣೆ ಮಾಡಿದ ಕಟ್ಟಿಗೆ ಅಲ್ಲ ಚೆಲ್ಲಾಪಿಲ್ಲಿಯಾದ ಕಟ್ಟಿಗೆ ಎಂದರೆ ಅವರು ಸದ್ರಿ ಹಂದಿಯನ್ನು ಸುಟ್ಟಮೇಲೆ ತೊಳೆಯಲು ಹೋಗಿರುತ್ತಾರೆ ಆ ಕಾರಣದಿಂದ ಕಟ್ಟಿಗೆಗಳು ಚೆಲ್ಲಾಪಿಲ್ಲಿಯಾಗಿರುತ್ತದೆ . ಈ ವಿಷಯವನ್ನು ಪಂಚನಾಮೆಯಲ್ಲಿ ಬರೆದಿಲ್ಲ .ಯಾವುದೆ ಪ್ರಕರಣದಲ್ಲಿ ಒಬ್ಬ ವ್ಯಕ್ತಿಯನ್ನು ಹಿಡಿದರೆ ಆ ವ್ಯಕ್ತಿಯ ಸುತ್ತಲು ಬೆಂಗಾವಲಾಗಿ ನೀವು ನಿಂತು ಕೊಳ್ಳುತ್ತೀರಿ ಎಂದರೆ ಸರಿ . ಅಂತಹ ವ್ಯಕ್ತಿಗಳಿಗೆ ನೀವುಗಳು ಕೈ ರಟ್ಟೆ ಹಿಡಿದು ಅವರನ್ನು ಜೊತೆಯಲ್ಲಿ ಹಿಡಿದು ಕೊಂಡಿರುತ್ತೀರಿ ಎಂದರೆ ಸರಿ . 1 ಮತ್ತು 2 ನೆ ಆರೋಪಿತರ ಜೊತೆಯಲ್ಲಿ ನಿಮ್ಮ ಅಧಿಕಾರಿಗಳು ಅರೊಪಿತರನ್ನು ಹಿಡಿದು ಕೊಂಡಂತೆ ಕಾಣುವುದಿಲ್ಲ ಎಂದರೆ ಸುತ್ತಲು ನಮ್ಮ ಸಿಬ್ಬಂದಿಗಳು ಇದ್ದು ಆರೋಪಿತರು ಓಡಿ ಹೋಗುವಂತವರಲ್ಲ ಎಂದು ಖಚಿತ ಪಡಿಸಿಕೊಂಡು ಆ ರೀತಿ ನಿಂತು ಕೊಂಡಿರುತೇವೆ . 1 ಮತ್ತು 2 ಅರೋತಪಿರು ಸದ್ರಿ ಪೊಟೊದಲ್ಲಿ ನಿರ್ಭಿತಿಯಿಂದ 1 ಮತ್ತು 2 ಅರೊಪಿತರು ಸಮಾಧಾನದಿಂದ ನಿಂತು ಕೊಂಡಿರುತ್ತಾರೆ ಎಂದರೆ ಸರಿ . ನೀವು ಹೇಳುವಂತಹ ಕಾಡು ಹಂದಿಯ ತಲೆ ಕಾಣುತ್ತಿಲ್ಲ ಎಂದರೆ ನೀವು ತೋರಿಸಿದ ಈ

ಪೊಟೊದಲ್ಲಿ ಕಾಣುವುದಿಲ್ಲ . ಅದೇ ರೀತಿ ಈ ಪ್ರಾಣಿಗೆ ಬಾಲ ಕೂಡ ಇಲ್ಲ ಎಂದರೆ ಸರಿ . ತಲೆ ಇಲ್ಲದ ಮತ್ತು ಬಾಲ ಇಲ್ಲದ ಪ್ರಾಣಿಯನ್ನು ನೋಡಿದರೆ ನಿಮಗೆ ಅದು ಕಾಡು ಹಂದಿ ಎಂದು ಗುರುತಿಸುವಂತಹ ವಿಶೇಷ ಪರಿಣಿತಿ ಇರುತ್ತದೆಯಾ ಎಂದರೆ ಇಲ್ಲ.

5. ಸ್ಥಳದಲ್ಲೆ ಹಂದಿ ಬಿದ್ದು ಒದ್ದಾಡಿದ ಕುರುಹು ಕಂಡುಬಂದಿತು ಎಂದು ನೀವು ಹೇಳಿದಂತೆ ಅದರ ಪೊಟೊವನ್ನು ನೀವು ತೆಗೆದಿರುತ್ತಿರಾ ಎಂದರೆ ತೆಗೆದಿರಬಹುದು ಆ ದರೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಆ ಪೊಟೊವನ್ನು ನಮ್ಮ ತನಿಖಾಧಿಕಾರಿಗೆ ತೋರಿಸಿರುತ್ತೇವೆ . ಆ ವಿದ್ಯುತ್ ಕಂಬ 10 ರಿಂದ 15 ಮೀಟರ ಎತ್ತರದಲ್ಲಿ ಇರಬಹುದು . ಸದ್ರಿ ವಿದ್ಯುತ ಕಂಬ ಪ್ರಾಣಿಯು ಸತ್ತು ಬಿದ್ದ ಸ್ಥಳದಿಂದ 10 ರಿಂದ 15 ಮೀಟರ ದೂರದಲ್ಲಿ ಇತ್ತು . ಅಲ್ಲಿ 1 ನೆ ಅರೋಪಿಯ ತಾಯಿ ವಾಸ ವಾಗಿರುವ ಮನೆಯಾಗಿತ್ತು . 20 ಮೀಟರ ದೂರದಿಂದ ವಿದ್ಯುತ್ ಕಂಬದಿಂದ ಸರ್ವಿಸ್ ವೈರ್ ಹಾಕಬೇಕಾಗುತ್ತದೆ ಎಂದರೆ ಅವರು ಸರ್ವಿಸ ವೈರ ಹಾಕಿಲ್ಲ ನ್ಯಾಯಾಲಯದ ಮುಂದೆ ಇರುವ ಐಬೆಕ್ಸ ತಂತಿಯಿಂದ ಮೇನ್ ಲೈನ್ ಗೆ ತಂತಿ ಅಳವಡಿಸಿದ್ದರು . ಅದೇ ರೀತಿ ಯಾವುದೆ ಒಂದು ತಂತಿ ವಿದ್ಯುತ ಮೇನ್ ಲೈನ ಗೆ ತಂತಿ ಅಳವಡಿಸಬೇಕಾದರೆ ಅದಕ್ಕೆ ಕೊಕ್ಕೆ ಮಾಡಿ ಅಳವಡಿಸಬೇಕಾಗುತ್ತದೆ ಎಂದರೆ ಸರಿ . ಸದ್ರಿ ಐಬೆಕ್ಸ ತಂತಿಯನ್ನು ನೇರವಾಗಿ ಮೇನ್ ಲೈನ್ ಹಾಕಿದರೆ ಆ ತಂತಿಯನ್ನು ಒಬ್ಬ ಮನುಷ್ಯ ಮೇನ ಲೈನ ಗೆ ಹಾಕುವಾಗಲೆ ವಿದ್ಯುತ ಹರಿದು ಆತನು ಆಗಲೆ ಸತ್ತು ಹೋಗುತ್ತಾನೆ .ಆ ಕಾರಣದಿಂದ ಸದ್ರಿ ಐಬೆಕ್ಸ ತಂತಿಯನ್ನು ಕಟ್ಟಿಗೆಯ ಕೊಕ್ಕೆ ಮೂಲಕ ಜೋಡಣೆ ಮಾಡಿರಬಹುದು . ಸದ್ರಿ ಐಬೆಕ್ಸ ತಂತಿಯನ್ನು ಕಟ್ಟಿಗೆ ಕೊಕ್ಕೆ ಮೂಲಕ ಮೇನ್ ಲೈನ ಗೆ ಅಳವಡಿಸಲಾಗಿದೆ ಎಂದು ನೀವು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ . ನ್ಯಾಯಾಲಯದ ಮುಂದೆ ಇರುವಂತಹ ಕಬ್ಬಿಣದ ತಂತಿಯನ್ನು ಒಂದು ತಂತಿಗೆ ಜೋಡಣೇ ಮಾಡಬೇಕಾದರೆ ಸದ್ರಿ ಕಬ್ಬಿಣದ ತಂತಿ ಸುತ್ತುತ್ತಲೆ ಬರುತ್ತದೆ ಎಂದರೆ ಅದು ನೇರ ಮಾಡಿದರೆ ನೇರವಾಗುತ್ತದೆ . ಸದ್ರಿ ಕಬ್ಬಿಣದ ತಂತಿಯನ್ನು ಕೈಯಿಂದಲೂ ನೇರ ಮಾಡಬೇಕಾಗುತ್ತದೆ ಎಂದರೆಸರಿ . ಕರೆಂಟ ಹರಿಯುತ್ತಿರುವಾಗ ಕಬ್ಬಿಣದ ತಂತಿ ನೇರ ಮಾಡಲು ಬರುವುದಿಲ್ಲ .

ಸಾಮಾನ್ಯವಾಗಿ ವಿದ್ಯುತಿನ ಮೇನ್ ಲೈನ್ ಗೆ ಗಿಡಗಳು ಬಿದ್ದಾಗ, ಕಟ್ಟಿಗೆ ಬಿದ್ದಾಗ , ಕಬ್ಬಿಣ ಸಿಕ್ಕಿಸಿದಾಗ ಕರೆಂಟ ಹೋಗುತ್ತದೆ ಮತ್ತು ಲೈನ್ ಟ್ರಿಪ್ ಆಗುತ್ತದೆ ಎಂದರೆ 2 ತಂತಿಗಳು ಒಂದಕ್ಕೊಂದು ತಾಗಿದಾಗ ಲೈನ ಟ್ರಿಪ್ ಆಗುತ್ತದೆ . ಇಂತಹ ಒಂದು ಕಬ್ಬಿಣದ ತಂತಿಯನ್ನು ಮೇನ ಲೈನ ಗೆ ಹಾಕಿದಾಗ ವಿದ್ಯುತ್ ಹೋಗುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ . ಮು.ಮಾ–1 ರ ತಂತಿಗಳು ನಿಮ್ಮ ಕಚೇರಿಯಲ್ಲಿ ಸಿಗುತ್ತದೆ ಎಂದರೆ ಸರಿಯಲ್ಲ . ಮು.ಮಾ–1 ರ ತಂತಿಗಳು ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸಿಗಬಹುದು . ಚಾಸಾ–1 ರವರು ಸುಳ್ಳು ದೂರಿಗೆ ಪೂರಕವಾಗಿ ಮುಮಾ–1 ರಂತಹ ತಂತಿಯನ್ನು ಕೊಟ್ಟದ್ದು ಎಂದರೆ ಸರಿಯಲ್ಲ . ದಿಃ5–1–2022 ರ ಸಮಯದಲ್ಲಿ ನೀವು ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ಚಾಸಾ–1 ರವರು ನನಗೆ ಪೋನ ಮಾಡಿ ಕರೆದರು ಅದರಂತೆ ನಾವುಗಳು ಚಾಸಾ 2,3 ರವರನ್ನು ಕರೆದುಕೊಂಡು ಮದ್ದಣ ಮನೆ ನಾಲಾದ ಬಳಿ ಹೋದೆವು ಅಲ್ಲಿ 4 ಜನರು ಇದ್ದರು ಅದರಲ್ಲಿ ಇಬ್ಬರು ಓಡಿ ಹೋದರು ಇಬ್ಬರು ಸಿಕ್ಕರು ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂರೆ ಸರಿಯಲ್ಲ . ಅದರಂತೆ ನೀವು ಆ ಸ್ಥಳದಲ್ಲಿ ಪಂಚನಾಮೆ ಮಾಡಿ ಪೊಟೊ ತೆಗೆದಿರುತ್ತೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಅದೇ ರೀತಿ ನೀವು ಪಂಚನಾಮೆ ಯನ್ನು ಹಂದಿ ಸತ್ತು ಬಿದ್ದಂತಹ ಸ್ಥಳದಲ್ಲಿ ಮತ್ತು ಮದ್ದನ ಮನೆ ನಾಲಾದಲ್ಲಿ ಪಂಚನಾಮೆ ಮಾಡಿರುತ್ತೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂರದೆ ಸರಿಯಲ್ಲ . ಅದರಂತೆ 1 ಮತ್ತು 2 ಅರೋಪಿತರನ್ನು ಮನೆಯಿಂದ ಹಿಡಿದು ಕೊಂಡು ಬಂದು ಮದ್ದನ ಮನೆ ನಾಲಾದಿಂದ ಹಿಡಿದು ಕೊಂಡು ಬಂದಿರುತ್ತೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂರೆ ಸರಿಯಲ್ಲ .ದಿಃ7–1–2022 ರಂದು ನೀವು ಮದ್ದಣ ನಾಲಾಗೆ ಹೊದದ್ದು ಇಲ್ಲ ಪಂಚನಾಮೆ ಮಾಡಿದ್ದು ಇಲ್ಲ , ಪೊಟೊ ತೆಗೆದದ್ದು ಇಲ್ಲ , ಹಂದಿಯನ್ನು ಸುಟ್ಟದ್ದು ಇಲ್ಲ ಎಂದರೆ ಸರಿಯಲ್ಲ . ಸಿದ್ದಿ ಜನಾಂಗದವರು ಅರಣ್ಯ ಇಲಾಖೆಯ ಸಿಬ್ಬಂದಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಮೇಲಾಧಿಕಾರಿ ಬಳಿ ದೂರನ್ನು ಕೊಟ್ಟಿದ್ದರು ಎಂರೆ ಸರಿಯಲ್ಲ . ಅದೇ ರೀತಿ 2021–22 ರಲ್ಲಿ ಅರಣ್ಯ ಅಧಿಕಾರಿಗಳು ರಕ್ಷಕ ರಲ್ಲ ಬಕ್ಷಕರು ಎಂದು ದಿನಪತ್ರಿಕೆಯಲ್ಲಿ ಪ್ರಕಟಣೆ ಬಂದಿತ್ತು ಎಂದರೆ ಸರಿಯಲ್ಲ . ಹಾಗಾಗಿ ನೀವು ಸಿದ್ದಿ

ಜನಾಂಗದವರ ಮೇಲೆ ಹಾಗೂ ಅರೋಪಿ 4 ರವರು ಸಿದ್ದಿ ಜನಾಂಗದರವರ ಸ್ನೇಹಿತರು ಆಗಿರುವುದರಿಂದ ಇವರೆಲ್ಲರ ಮೇಲೆ ದ್ವೇಷ ಇಟುಕೊಂಡು ಈ ಸುಳ್ಳು ಪ್ರಕರಣ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ . ಎಲ್ಲೊ ಒಂದು ಸತ್ತು ಬಿದ್ದ ಪ್ರಾಣಿಯನ್ನು ತಂದು ಈ ಪ್ರಕಣವನ್ನು ಅರೋಪಿತರ ಮೇಲೆ ಇರುವ ದ್ವೇಷದಿಂದ ಸೃಷ್ಟಿ ಮಾಡಿ ಅದಕ್ಕೆ ಪೂರಕವಾಗಿ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದೀರಿ ಎಂರೆ ಸರಿಯಲ್ಲ . 2 ಪಂಚನಾಮೆಗಳನ್ನು ನಿಮ್ಮ ಕಚೇರಿಯಲ್ಲಿ ತಯಾರಿಸಿದ್ದು ಎಂದರೆ ಸರಿಯಲ್ಲ . ನೀವು ಇವೆಲ್ಲ ವಿಷಯ ಗೊತ್ತಿದ್ದರೂ ಸಹ ಚಾಸಾ –1 ರವರು ನಿಮ್ಮ ಮೇಲಾಧಿಕಾರಿಯಾಗಿರುವುದರಿಂದ ಚಾಸಾ–1 ರವರಿಗೆ ಯಾವುದೆ ತೊಂದರೆ ಯಾಗಬಾರದು ಎಂದು ನೀವು ಇವೆಲ್ಲ ಸುಳ್ಳು ಹೇಳಿದ್ದು ಎಂದರೆ ಸರಿಯಲ್ಲ . ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸ ರಿಯಲ್ಲ .

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.

<u>**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ,  ಅಂಕೋಲಾ.**</u>

ಸಿ.ಸಿ. ನಂ.241–22

ಡಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರು : ಸಂದೀಪ ಮೋಹನ ಗಾಂವಕಾರ

ತಂದೆಯ ಹೆಸರು : ಮೋಹನ ಬಿರಪ್ಪಾ ಗಾಂವಕಾರ

ವಯಸ್ಸು : 38 ವರ್ಷ

ಉದ್ಯೋಗ : ಚಾಲಕ

ವಾಸ : ಅಂಕೋಲಾ

ದಿನಾಂಕಃ 06–03–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಆರೋಪಿ</u> ಶ್ರೀ ವಿ.ವಿ.ಎಸ್ ವಕೀಲರಿಂದಃ**

1. ನಾನು 10 ವರ್ಷದ ಮೊದಲು ಸೂರ್ಯಾ ಸಹಕಾರಿ ಸಂಘದಲ್ಲಿ 40 ಸಾವಿರ ಸಾಲ ಮಾಡಿದ್ದೆ . ನಾನು ಆ ಸಾಲ ಮರು ಪಾವತಿ ಮಾಡಿರುತ್ತೇನೆ . ಆ ಸಾಲ ತೆಗೆದುಕೊಳ್ಳುವ ಸಮಯದಲ್ಲಿ ನಾನು 4 ಚೆಕ್ ಕೊಟ್ಟಿದ್ದೆ ಸಾಲ ಮರು ಪಾವತಿ ಯಾದ ನಂತರದಲ್ಲಿ ಆ ಚೆಕ್ ಗಳನ್ನು ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು ಸಾಲ ಮರು ಪಾವಸಿದರೂ ಆ ಚೆಕ್ ಗಳನ್ನು ಅವರು ವಾಪಸ್ಸು ಕೊಟ್ಟಿಲ್ಲ . ಅದರ ನಂತರ ನಾನು ಅವರ ಬಳಿ ಕೇಳಲು ಹೋಗಿಲ್ಲ ಸುಮ್ಮನೆ ಇದ್ದೆ . ನಂತರ 2–3 ವರ್ಷಗಳ ಹಿಂದೆ ಕೊರ್ಟ ದಿಂದ ಸಮನ್ಸ ಬಂದಿದೆ ಎಂದು ಕೋರ್ಟ ಪೋಲಿಸರು ಬಂದಿದ್ದರು . ಅವರು ನಿಮ್ಮ ಮೇಲೆ ಚೆಕ್ ಬೌನ್ಸ ಅಗಿದೆ ಎಂದು ಹೇಳಿದರು ನಾನು ಯಾವ ಬ್ಯಾಂಕ ನದ್ದು ಎಂದು ಕೇಳಿದಾಗ ಅವರು ಸೂರ್ಯಾ ಸಹಕಾರಿ ಬ್ಯಾಂಕ ದು ಎಂದು ಹೇಳಿರುತ್ತಾರೆ . ನಾನು ಹಣ ತುಂಬಿರುತ್ತೇನೆ. ಆದರೂ ಯಾಕೆ ಕೇಸ್ ಹಾಕಿದರು ಎಂದು ಕೇಳಿದಾಗ ಪ್ರಕರಣ ದಾಖಲು ಆಗಿದೆ ಅದು ಏನೆ ಇದ್ದರೂ ನ್ಯಾಯಾಲಯದಲ್ಲಿ

ನೋಡಿ ಕೊಳ್ಳಿ ಎಂದು ಹೇಳಿ ಹೋದರು ಅದೇ ರೀತಿ ಯಾಗಿ ನಾನು ನ್ಯಾಯಾಲಯಕ್ಕೆ ಬರುತ್ತಿದ್ದೇನೆ . ನಾನು ಬೇರೆ ಯಾವುದೆ ಸಾಲ ಮಾಡಿಲ್ಲ . ಈ ಪ್ರಕರಣದಲ್ಲಿ ತೋರಿಸಿದ ಸಾಲ ನಾನು ಮಾಡಿಲ್ಲ . ಸಾಕ್ಷಿಯು ನೋಟರಿಕೃತ ಸಾಲದ ಪಾಸ್ ಪುಸ್ತಕ ಹಾಗೂ ಚೆಕ ಉಳಿತಾಯದ ಠೇವು ರಶೀದಿಯನ್ನು ಹಾಜರ ಪಡಿಸಿದ್ದು ಸದ್ರಿ ದಾಖಲಾತಿಗಳ ಮೂಲ ದಾಖಲಾತಿ ಹಾಜರ ಪಡಿಸಿದ್ದು ಪರಿಶೀಲನೆ ಮಾಡಿ ನೋಡಿ ಹಿಂತಿರುಗಿಸಿ ನೋಟರಿ ಕೃತ ದಾಖಲಾತಿಗಳನ್ನು ನಿಡಿ–5 ಮತ್ತು 6 ಎಂದು ಗುರುತಿಸಲಾಯಿತು .

( ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಸಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.**

ಸಿ.ಸಿ. ನಂ.81-2024

ಡಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರು : ಸಂದೀಪ ಮೋಹನ ಗಾಂವಕಾರ

ತಂದೆಯ ಹೆಸರು : ಮೋಹನ ಬಿರಪ್ಪಾ ಗಾಂವಕಾರ

ವಯಸ್ಸು : 38 ವರ್ಷ

ಉದ್ಯೋಗ : ಚಾಲಕ

ವಾಸ : ಅಂಕೋಲಾ

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿ ಶ್ರೀ ವಿ.ವಿ.ಎಸ್ ವಕೀಲರಿಂದಃ**

1. ನಾನು 10 ವರ್ಷದ ಮೊದಲು ಸೂರ್ಯಾ ಸಹಕಾರಿ ಸಂಘದಲ್ಲಿ 40 ಸಾವಿರ ಸಾಲ ಮಾಡಿದ್ದೆ . ನಾನು ಆ ಸಾಲ ಮರು ಪಾವತಿ ಮಾಡಿರುತ್ತೇನೆ . ಆ ಸಾಲ ತೆಗೆದುಕೊಳ್ಳುವ ಸಮಯದಲ್ಲಿ ನಾನು 4 ಚೆಕ್ ಕೊಟ್ಟಿದ್ದೆ ಸಾಲ ಮರು ಪಾವತಿ ಯಾದ ನಂತರದಲ್ಲಿ ಆ ಚೆಕ್ ಗಳನ್ನು ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು ಸಾಲ ಮರು ಪಾವಸಿದರೂ ಆ ಚೆಕ್ ಗಳನ್ನು ಅವರು ವಾಪಸ್ಸು ಕೊಟ್ಟಿಲ್ಲ . ಅದರ ನಂತರ ನಾನು ಅವರ ಬಳಿ ಕೇಳಲು ಹೋಗಿಲ್ಲ ಸುಮ್ಮನೆ ಇದ್ದೆ . ನಂತರ 2-3 ವರ್ಷಗಳ ಹಿಂದೆ ಕೋರ್ಟ ದಿಂದ ಸಮನ್ಸ ಬಂದಿದೆ ಎಂದು ಕೋರ್ಟ ಪೋಲಿಸರು ಬಂದಿದ್ದರು . ಅವರು ನಿಮ್ಮ ಮೇಲೆ ಚೆಕ್ ಬೌನ್ಸ ಅಗಿದೆ ಎಂದು ಹೇಳಿದರು ನಾನು ಯಾವ ಬ್ಯಾಂಕ ನದ್ದು ಎಂದು ಕೇಳಿದಾಗ ಅವರು ಸೂರ್ಯಾ ಸಹಕಾರಿ ಬ್ಯಾಂಕ ದು ಎಂದು ಹೇಳಿರುತ್ತಾರೆ . ನಾನು ಹಣ ತುಂಬಿರುತ್ತೇನೆ. ಆದರೂ ಯಾಕೆ ಕೇಸ್

ಹಾಕಿದರು ಎಂದು ಕೇಳಿದಾಗ ಪ್ರಕರಣ ದಾಖಲು ಆಗಿದೆ ಅದು ಏನೆ ಇದ್ದರೂ ನ್ಯಾಯಾಲಯದಲ್ಲಿ ನೋಡಿ ಕೊಳ್ಳಿ ಎಂದು ಹೇಳಿ ಹೋದರು ಅದೇ ರೀತಿ ಯಾಗಿ ನಾನು ನ್ಯಾಯಾಲಯಕ್ಕೆ ಬರುತ್ತಿದ್ದೇನೆ . ನಾನು ಬೇರೆ ಯಾವುದೆ ಸಾಲ ಮಾಡಿಲ್ಲ . ಈ ಪ್ರಕರಣದಲ್ಲಿ ತೋರಿಸಿದ ಸಾಲ ನಾನು ಮಾಡಿಲ್ಲ . ಸಾಕ್ಷಿಯು ನೋಟರಿಕೃತ ಸಾಲದ ಪಾಸ್ ಪುಸ್ತಕ ಹಾಗೂ ಚೆಕ ಉಳಿತಾಯದ ಠೇವು ರಶೀದಿಯನ್ನು ಹಾಜರ ಪಡಿಸಿದ್ದು ಸದ್ರಿ ದಾಖಲಾತಿಗಳ ಮೂಲ ದಾಖಲಾತಿ ಹಾಜರ ಪಡಿಸಿದ್ದು ಪರಿಶೀಲನೆ ಮಾಡಿ ನೋಡಿ ಹಿಂತಿರುಗಿಸಿ ನೋಟರಿ ಕೃತ ದಾಖಲಾತಿಗಳನ್ನು ನಿಡಿ-2 ಮತ್ತು 3 ಎಂದು ಗುರುತಿಸಲಾಯಿತು .

( ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಸಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.